ವಿಫವಾಗಿರತಕ್ಕಂತಹ ಸೌಲಭ್ಯವನ್ನು ಈಗಿರತಕ್ಕ ಸಹಕಾರಿ ಆದೇಶದ ಪ್ರಕಾರ ಪಡೆಯಬಹುದಾಗಿದೆ. ಇನ್ನೊ ಮುಂದೆ ಬರತಕ್ಕಂಥ ಸರ್ಕಾರಿ ಆಜ್ಞೆಯಲ್ಲಿ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿದರೆ ಆ ಆಶ್ವಾಸನೆಯನ್ನು ಈಗ ಕೊಡುವುದಕ್ಕಾಗುವುದಿಲ್ಲ. ಈ ಪ್ರಶ್ನೆ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿ ಏನು ಇದೆ ಮತ್ತಕ್ಕೆ ಅದಕ್ಕನುಗುಣವಾಗಿ ಸರಕಾರ ಏನು ಕಾರ್ಯಕ್ರಮ ಅಥವಾ ನಿರ್ಣಯ ತೆಗದುಕೊಳ್ಳುತ್ತದೆ ಅದನ್ನು ಹೊಂದಿಕೊಂಡಿರುತ್ತದೆ.

MR. DERRICK M. B. FULLINFAW.—Sir, the concessions available under this Group is not going to held the community, in any way, at all. I demand that our Community be classified as Backward Community in regular group. Secondly Sir, the Anglo-Indian Community, as most of us know, is highly poverty-stricken community. 90% of them are poverty-stricken and condition of 30% 40% of them is highly deplorable and pathetic. Will the Government take immediate steps and relief measures to uplift this sanction of Anglo-Indian Community ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದ ಪ್ರಕಾರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆರ್ಥಿಕಾಭಿವೃದ್ಧಿಗಾಗಿ ಕೆಲವು ಕಾರ್ಯಕ್ರಮಗಳಿವೆ. ಬಹುಶಃ I can advise the Minority Development Corporation to work out certain very special Programmes as for as Anglo-Indian Community is concerned. We will definitely take it up such of the programmes which will lift up Anglo-Indian Community economically.

MR. DERRICK M. B. FULLINFAW.—Thank you Sir.

(ಪ್ರಶ್ನೆ ಸಂಖ್ಯೆ ೪೬೬(೧೪೯೦) ಮತ್ತು ೪೬೭(೧೫೮೪) ಮಾನ್ಯ ಸದಸ್ಯರು ಗೈರುಹಾಜರು)

ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ ಮತ್ತು ಆದಾಯ ಮಿತಿಯನ್ನು ಹೆಚ್ಚಿಸುವ ಬಗ್ಗೆ

೧೪೮೦. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಕಾನೂನು, ಸಂಸದೀಯ ವ್ಯವಹಾರ, ಯೋಜನೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಅಂಗವಿಕಲ ವ್ಯಕ್ತಿಗತ ವಾರ್ಷಿಕ ವರಮಾನ ರೂ. ೬೦೦೦.೦೦ಕ್ಕಿಂತ ಕಡಿಮೆ ಇದ್ದವರಿಗೆ ಮಾಹೆಯಾನ ನಿರ್ವಹಣಾ ಭತ್ಯೆಯನ್ನು ನೀಡಲಾಗುತ್ತಿದೆಯೇ ?

ಆ) ವಾರ್ಷಿಕ ವರಮಾನದ ಮಿತಿಯನ್ನು ರೂ. ೬೦೦೦.೦೦ ದಿಂದ ೧೨,೦೦೦.೦೦ಕ್ಕೆ ಮತ್ತು ನಿರ್ವಹಣಾ ಭತ್ಯೆಯನ್ನು ರೂ. ೧೦೦.೦೦ಕ್ಕೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು, ಸಂಸದೀಯ ವ್ಯವಹಾರ ಮತ್ತು ಯೋಜನೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಅ) ಹೌದು, ಮಾಹೆಯಾನ ರೂ. ೫೦.೦೦.

ಆ) ಇಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೆ, ಅಂಗವಿಕಲರಿಗೆ ಮಾಹೆಯಾನ ನಿರ್ವಹಣಾ ಭತ್ಯೆ ೫೦ ರೂಪಾಯಿಗಳನ್ನು ಕೊಡುತ್ತಿದ್ದಾರೆ ಅದನ್ನು ಒಂದು ದಿನಕ್ಕೆ ಲೆಕ್ಕ ಹಾಕಿದರೆ ೧-೬೦ ರೂಪಾಯಿ ಆಗುತ್ತದೆ. ಈ ಹಣವನ್ನು ಕೊಟ್ಟರೂ ಕೂಡ ಅದರಿಂದ ಅವರಿಗೆ ಏನು ಪ್ರಯೋಜನ ವಾಗುವುದಿಲ್ಲ. ಏಕೆಂದರೆ, ಅಂಗವಿಕಲರನ್ನು ನೋಡಿಕೊಳ್ಳುವುದು ಸರ್ಕಾರದ ಹೊಣೆ. ಆದ್ದರಿಂದ ಇದನ್ನು ೫೦ ರೂಪಾಯಿ ಯಿಂದ ನೂರು ರೂಪಾಯಿಗೆ ಏರಿಸುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲವೆಂದು

ಹೇಳಿದ್ದಾರೆ. ಆದರೆ ಈ ೫೦ ರೂಪಾಯಿ ಕೊಡುವುದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅದನ್ನು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುತ್ತಿದ್ದೇನೆ. ಇನ್ನು ವಾರ್ಷಿಕ ವರಮಾನ ೬ ಸಾವಿರ ಮಿತಿ ಇದ್ದರೆ ಮಾತ್ರ ಇದಕ್ಕೆ ಅರ್ಜಿ ಹಾಕಬಹುದು ಎಂದು ಇದೆ. ಈ ಕಾಲದಲ್ಲಿ ಸಣ್ಣ ಪುಟ್ಟ ಆದಾಯವಿದ್ದರೂ ಕೂಡ ೬ ಸಾವಿರ ರೂಪಾಯಿ ವರಮಾನ ಬರುತ್ತದೆ. ಆದ್ದರಿಂದ ಈ ಆರು ಸಾವಿರ ರೂಪಾಯಿ ಮಿತಿಯನ್ನು ೧೨ ಸಾವಿರಕ್ಕೆ ಏರಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ನಿರ್ವಹಣಾ ಭತ್ಯೆಯನ್ನು ೫೦ ರೂಪಾಯಿಯಿಂದ ೧೦೦ ರೂಪಾಯಿಗೆ ವಿಸ್ತರಣೆ ಮಾಡತಕ್ಕಂತಹ ಪ್ರಸ್ತಾವನೆ ಸರಕಾರದಲ್ಲಿ ಇಲ್ಲ. ಮತ್ತೆ ವಾರ್ಷಿಕ ವರಮಾನವನ್ನು ೬ ಸಾವಿರದಿಂದ ೧೨ ಸಾವಿರಕ್ಕೆ ಏರಿಸತಕ್ಕಂತಹ ಪ್ರಸ್ತಾವನೆ ಕೂಡ ಸಧ್ಯಕ್ಕೆ ಸರಕಾರದಲ್ಲಿ ಇಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ನೀವು ೫೦ ರೂಪಾಯಿಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ೫೦ ರೂಪಾಯಿಗಳನ್ನು ಕೊಡುವುದರಿಂದ ಅವರಿಗೆ ಪ್ರಯೋಜನವಾಗದೇ ಇರುವುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ಇದನ್ನು ಜಾಸ್ತಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೫೦ ರೂಪಾಯಿಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬ ಮಾನ್ಯ ಸದಸ್ಯರ ವಾದವನ್ನು ಸರ್ಕಾರ ಒಪ್ಪುವುದಕ್ಕೆ ಆಗುವುದಿಲ್ಲ. ಇದರಿಂದ ಬಹಳ ಜನರಿಗೆ ಪ್ರಯೋಜನವಾಗಿದೆ. ಏಕೆಂದರೆ ಈ ವರ್ಗದ ಜನರು ಚಾತಕ ಪಕ್ಷಿಯಂತೆ ಕಾದು ಈ ಹಣದಿಂದ ತಮ್ಮ ಜೀವನದಲ್ಲಿ ನೆಮ್ಮದಿಯ ಉಸಿರನ್ನು ಬಿಡುತ್ತಿದ್ದಾರೆ. ಮಾನ್ಯ ಸದಸ್ಯರು ೫೦ ರೂಪಾಯಿಗಳಿಂದ ೧೦೦ ರೂಪಾಯಿಗೆ ಹೆಚ್ಚಿಸಬೇಕೆಂದು ಏನು ಹೇಳಿದ್ದಾರೆ ಆ ರೀತಿ ಮಾಡಿದರೆ ನಮ್ಮ ಖಜಾನೆಯ ಮೇಲೆ ಬೀಳತಕ್ಕಂಥ ಹೊರೆಯ ಗಾತ್ರವನ್ನೂ ಕೂಡ ನಾವು ಆಲೋಚನೆ ಮಾಡಬೇಕಾಗುತ್ತದೆ. ಈ ಕಾರಣದಿಂದ ಈ ಪ್ರಸ್ತಾವನೆ ಸದ್ಯದಲ್ಲಿ ಸರ್ಕಾರದಲ್ಲಿಲ್ಲ ಈಗ ಮಾನ್ಯ ಸದಸ್ಯರು ಏನಂ ವಿಚಾರ ಹೇಳಿದ್ದಾರೆ ಇದರ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆ ಮಾತ್ನಾಡಿಯೂ ಕೂಡ ನಾನು ಪ್ರಸ್ತಾಪ ಮಾಡುತ್ತೇನೆ. ಆದರೆ ಸದ್ಯದ ಮಟ್ಟಿಗೆ ಮಾತ್ರ ಈ ಪ್ರಸ್ತಾವನೆ ಸರ್ಕಾರದಲ್ಲಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಎಂ. ರೇವಣ್ಣ.—ಮಾನ್ಯ ಅಧ್ಯಕ್ಷರೆ, ಅಂಗವಿಕಲರ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಒಂದು ಸಂಸ್ಥೆ ಇದೆ. ಈ ಸಂಸ್ಥೆಯು ಪ್ರತಿವರ್ಷವೂ ಅಂಗವಿಕಲರಿಗೆ ತ್ರಿಚಕ್ರ ವಾಹನಗಳನ್ನು ಕೊಡುತ್ತಿತ್ತು. ಆದರೆ ಕಳೆದ ೩-೪ ವರ್ಷಗಳಿಂದ ಯಾರಿಗೂ ತ್ರಿಚಕ್ರ ವಾಹನಗಳನ್ನು ಕೊಡುತ್ತಿಲ್ಲ. ಆದ್ದರಿಂದ, ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಈ ತ್ರಿಚಕ್ರ ವಾಹನಗಳನ್ನು ಅಂಗವಿಕಲರಿಗೆ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲನೆ ಮಾಡಲಾಗುವುದು.

ರಾಜಾಜಿನಗರ ಕ್ಷೇತ್ರದ ಜನರಿಗೆ ಮನೆಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೩೫. ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ).—ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜಾಜಿ ನಗರ ಕ್ಷೇತ್ರಕ್ಕೆ ಸೇರಿದ ನಾಗರೀಕರು ಮನೆ ಬಳಕೆ ವಿದ್ಯುತ್‌ಗೆ ೧೯೮೯ನೇ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಆ ಪೈಕಿ ಎಷ್ಟು ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ ?

ಆ) ಇನ್ನು ಎಷ್ಟು ಮನೆಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ, ಇದಕ್ಕೆ ವಿಳಂಬವಾಗಲು ಕಾರಣವೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ರಾಜಾಜಿನಗರದ ಕ್ಷೇತ್ರಕ್ಕೆ ಸೇರಿದ ನಾಗರೀಕರಿಂದ ಮನೆ ಬಳಕೆಗೆ ವಿದ್ಯುತ್‌ಗೆ ೧೯೮೯ನೇ ಜನವರಿಯಿಂದ ಇಲ್ಲಿಯವರೆಗೆ ಒಟ್ಟು ೬,೦೫೯ ಅರ್ಜಿಗಳನ್ನು ಸಲ್ಲಿಸಿದ್ದಾರೆ. (ಇದರಲ್ಲಿ ಮನೆ ದೀಪಗಳಿಗೆ